ಸಹಿಸಲಾರದೆ ತಮ್ಮ ಪ್ರಾಣ ಬಿಡಲು ನಿರ್ಧರಿಸಿದರು. ನಾನು ಇದೆಲ್ಲ ಬೇಡ ಅಂತ ಗೋಗರೆದೆ. ಆದರೆ, ಅವರ ಮನಸ್ಸು ದೃಢವಾಗಿತ್ತು. ಅವರ ಒಂದು ಕೊರಗು ಇದ್ದಿದ್ದು ನಿನ್ನ ತಾಯಿ ಬಗ್ಗೆ. ಡಾ. ವಿಲಿಯಂ ಅವರಿಗೆ ಯಾವುದೇ ರೀತಿಯ ಗಾಬರಿಯಾದರೂ ಹೃದಯಾಘಾತವಾಗುತ್ತದೆ ಎಂದಿದ್ದರು ಮತ್ತು ಹೆಚ್ಚು ದಿನ ಬದುಕಿರುವುದಿಲ್ಲ ಎಂದೂ ಹೇಳಿದ್ದರು. ಆದ್ದರಿಂದ ಎಲ್ಲರಿಗೂ ತಿಳಿಯುವಹಾಗೆ ಆತ್ಮಹತ್ಯೆ ಮಾಡಿಕೊಳ್ಳುವುದು ಸರಿಯಲ್ಲ ಅಂತ ತೀರ್ಮಾನಿಸಿ, ಎರಡು ಪತ್ರಗಳನ್ನು ಬರೆದು ಆಗಾಗ್ಗೆ ತಲುಪಿಸುವುದಕ್ಕೆ ಅಪ್ಪಣೆ ಮಾಡಿದ್ದರು. ನಿನ್ನ ತಾಯಿ ಐದು ವರ್ಷ ಬದುಕಿದ್ದರು. ಇನ್ನೊಂದು ಕಾಗದವನ್ನು ನಿನ್ನ ತಾಯಿ ತೀರಿದಮೇಲೆ ತಲುಪಿಸಬೇಕಾಗಿತ್ತು. ಈ ಎಲ್ಲ ಪತ್ರಗಳನ್ನು ಪ್ಯಾರಿಸ್‌ನಿಂದ ಕಳುಹಿಸಬೇಕಾಗಿತ್ತು. ಏಳು ವರ್ಷಗಳ ಬಳಿಕ ಎಲ್ಲರೂ ತಮಗಾಗಿರುವ ಅನ್ಯಾಯ ಮತ್ತು ನೋವನ್ನು ಮರೆತಿರಬಹುದು ಅಥವಾ ಕಡಿಮೆ ಆಗಿರಬಹುದೆಂಬುದು ಅವರ ನಂಬಿಕೆ ಇದ್ದಿರಬೇಕು. ನನ್ನನ್ನು ನೀವು ತಪ್ಪಿತಸ್ಥನನ್ನಾಗಿ ಮಾಡುವುದು ಬೇಡ. ನನ್ನ ತಪ್ಪು ಇದರಲ್ಲಿ ಏನೂ ಇಲ್ಲ. ಈ ವಿಚಾರವನ್ನೇ ನಿಮ್ಮ ತಂದೆ ಬರೆದಿರಬೇಕು. ಇದನ್ನು ಓದಲೇ ಈಗ?''

''ಓದು.''

''ನಾನು ವಿಷ ತೆಗೆದುಕೊಂಡಿದ್ದೇನೆ; ಅದು ನನ್ನ ರಕ್ತನಾಳಗಳಲ್ಲಿ ಕೆಲಸ ಮಾಡುತ್ತಿರುವುದು ಗೊತ್ತಾಗುತ್ತಿದೆ. ಇದು ವಿಚಿತ್ರವಾಗಿದ್ದರೂ ನೋವು ಇಲ್ಲ. ಇದನ್ನು ನೀವು ಓದುತ್ತಿರುವ ವೇಳೆಗೆ ನನ್ನ ಕೋರಿಕೆಯನ್ನು ಪಾಲಿಸಿದ್ದರೆ, ನಾನು ಸತ್ತು ಬಹಳ ವರ್ಷಗಳಾಗಿರುತ್ತವೆ. ಹಣ ಕಳೆದುಕೊಂಡವರಿಗೆ ಇನ್ನೂ ನನ್ನ ಮೇಲೆ ದ್ವೇಷ ಇರುವುದಿಲ್ಲ ಅಂತ ಭಾವಿಸಿದ್ದೇನೆ. ಫೀಲಿಕ್ಸ್, ನೀನು ನಮ್ಮ ಕುಟುಂಬದ ಮೇಲೆ ಬಂದಿರುವ ಅಪವಾದಕ್ಕೆ ನನ್ನನ್ನು ಕ್ಷಮಿಸು. ದೇವರು ನಿನಗೆ ಒಳ್ಳೆಯದು ಮಾಡಲಿ.''

ಇದನ್ನು ಕೇಳಿ ನಾವೆಲ್ಲರೂ ಒಟ್ಟಿಗೆ ''ಅಮೆನ್'' ಅಂದೆವು.

### ಆರ್ಥರ್ ಕಾನನ್ ಡಾಯ್ಲ್ (1859–1930)

ಪತ್ತೆದಾರ ಷರ್ಲಾಕ್ ಹೋಮ್ಸ್ ಪಾತ್ರವನ್ನು ಸೃಷ್ಟಿಸಿ ಕತೆಗಳನ್ನು ಬರೆದ ಇಂಗ್ಲಿಷ್ ಲೇಖಕ ಆರ್ಥರ್ ಕಾನನ್ ಡಾಯ್ಲ್‌ನ ಹೆಸರು ಪತ್ತೆದಾರಿ ಕತೆಗಳನ್ನು ಓದುವವರಿಗೆ ಪರಿಚಿತ. ಡಾಯ್ಲ್, ಷರ್ಲಾಕ್ ಹೋಮ್ಸನ ಪಾತ್ರವಿರುವ 56 ಸಣ್ಣಕತೆಗಳನ್ನು, ನಾಲ್ಕು ಕಾದಂಬರಿಗಳನ್ನು ಬರೆದಿದ್ದಾರೆ.

ಸ್ಕಾಟ್‌ಲ್ಯಾಂಡ್‌ನ ಎಡಿನ್‌ಬರೋದಲ್ಲಿ ಹುಟ್ಟಿದ ಡಾಯ್ಲ್ ವೈದ್ಯರಾಗಿದ್ದರು. ಡಾಯ್ಲ್ ರಹಸ್ಯ ಕತೆಗಳನ್ನೂ ಬರೆದಿದ್ದಾರೆ. ಅಂತಹದ್ದೊಂದು ರಹಸ್ಯ ಕತೆ 'ದಿ ಸ್ಟೋರಿ ಆಫ್ ದಿ ಸೀಲ್ಡ್ ರೂಮ್'ನ ಕನ್ನಡ ಅನುವಾದ ಇಲ್ಲಿದೆ.

### ಎಚ್.ಎನ್. ರಾಮಮೂರ್ತಿ

ಇಂಗ್ಲೆಂಡಿನ ಹ್ಯಾಮ್‌ಶೈರ್‌ನ ಬೇಸಿಂಗ್‌ಸ್ಟೋಕ್‌ನಲ್ಲಿ 55 ವರ್ಷಗಳಿಂದ ನೆಲೆಸಿರುವ ರಾಮಮೂರ್ತಿ ಎಲೆಕ್ಟ್ರಿಕಲ್ ಎಂಜಿನಿಯರ್ ವೃತ್ತಿಯಿಂದ ನಿವೃತ್ತರು. ಇಂಗ್ಲೆಂಡ್‌ನ ಕನ್ನಡ ಬಳಗದ ಮಾಜಿ ಅಧ್ಯಕ್ಷರಾಗಿದ್ದರು. ಅವರ ಕನ್ನಡ ಬರಹಗಳು anivaasi.com ಎಂಬ ಆನ್‌ಲೈನ್ ಪತ್ರಿಕೆಯಲ್ಲಿ ಪ್ರಕಟವಾಗಿವೆ.